# ಹಾಂಗ್‌ಕಾಂಗ್‌ನಲ್ಲಿ ಕನ್ನಡ ಕಲಿ

(ಮೊದಲ ವರ್ಗ: ೨೦೦೭-೨೦೧೦

ಎರಡನೇ ವರ್ಗ: ೨೦೧೪-೨೦೧೬)

ಕನ್ನಡ ಭಾಷೆಯ ಜ್ಞಾನವನ್ನು ಕನ್ನಡ ಮಕ್ಕಳಿಗೆ ಹಾಗೂ ಕನ್ನಡೇತರರಿಗೆ ಹಂಚುವ ಹಿರಿದಾಸೆಯಿಂದ ಕನ್ನಡ ಸಂಘ ಹಾಂಗ್‌ಕಾಗ್ ಪ್ರಾರಂಭಿಸಿದ ಕಾರ್ಯಕ್ರಮವೇ "ಕನ್ನಡ ಕಲಿ”. ಜನಜೀವನದ ಸಂಸ್ಕೃತಿ, ಕಲೆ, ವಿಚಾರವನ್ನು ಜೀವಂತವಾಗಿರಿಸುವಲ್ಲಿ ಭಾಷೆಯ ಮಹತ್ವ ಅತ್ಯಮೂಲ್ಯ. ಮಾತೃಭಾಷೆಯ ನುಡಿಗಳು ಮನಮುಟ್ಟುವ ಪರಿ ಹಾಗೂ ಬೀರುವ ಗಾಢ ಅನುಭವವನ್ನು ಅನ್ಯಭಾಷೆಗಳು ಒದಗಿಸಿ ಕೊಡಲಾರವು. ನಮ್ಮ ಮುಂದಿನ ನವ ಪೀಳಿಗೆಗೆ ಕನ್ನಡದ ಕಂಪಿನ ಆನಂದ ಸಿಗುವಂತೆ ಮಾಡುವ ಸದುದ್ದೇಶದ ಒಂದು ಕಿರು ಪ್ರಯತ್ನ ಈ ಕನ್ನಡ ಕಲಿ ಕಾರ್ಯಕ್ರಮ. ಕನ್ನಡ ಮಕ್ಕಳಿಗೆ ಹಾಗೂ ಕನ್ನಡೇತರರಿಗೆ ಕನ್ನಡ ಲಿಪಿಯನ್ನು ಓದಲು ಹಾಗೂ ಬರೆಯಲು ಕಲಿಸಿಕೊಡುವದು, ಸರಳ ಕನ್ನಡದಲ್ಲಿ ಮಾತನಾಡಲು ಕಲಿಸಿಕೊಡುವುದು, ಕನ್ನಡ ಭಾಷೆಯ ಮೇಲೆ ಆಸಕ್ತಿ ಬೆಳೆಸುವುದು, ಕನ್ನಡ ಜನರ ಸಂಘಟನೆ ಕಲ್ಪಿಸುವುದು, ಕನ್ನಡ ಭಾಷಾಭಿಮಾನವನ್ನು ಬೆಳೆಸುವುದು ಮುಂತಾದ ಪ್ರತಿಫಲದ ನಿರೀಕ್ಷೆಯ ದಿಸೆಯಲ್ಲಿ ಸಾಗುತ್ತಿದೆ ನಮ್ಮ ಹಾಂಗ್‌ಕಾಂಗ್ ಕನ್ನಡ ಕಲಿ ಕಾರ್ಯಕ್ರಮ.



| ಮೊದಲ ಕನ್ನಡ ಕಲಿ ವರ್ಗದ ವಿದ್ಯಾರ್ಥಿಗಳು (೨೦೦೭ - ೨೦೧೦) | | ಪ್ರಮಾಣ ಪತ್ರ |
|---|---|---|
| 1 | ಅಭಿರಾಮ್ ರಂಗನ್ | ಕನ್ನಡ - ಪ್ರಥಮ |
| 2 | ಅಮೋಘಾ ಎಸ್ ಸುಧಾಕರ್ | ಕನ್ನಡ - ಪ್ರಥಮ |
| 3 | ಖುಶಿ ಕಿರಣ್ | ಕನ್ನಡ - ಪ್ರಥಮ |
| 4 | ಮೇಧಾ ವರ್ಣೇಕರ್ | ಕನ್ನಡ - ಪ್ರಥಮ |
| 5 | ಪವನ್ ಹೆಗ್ಡೆ | ಕನ್ನಡ - ಪ್ರಥಮ |
| 6 | ಪ್ರಣವ್ ವರ್ಣೇಕರ್ | ಕನ್ನಡ - ಪ್ರಥಮ |
| 7 | ಪ್ರೀತಿ ಪಧು | ಕನ್ನಡ - ಪ್ರಥಮ |
| 8 | ರಚನಾ ಕುಲಕರ್ಣಿ | ಕನ್ನಡ - ಪ್ರಥಮ |
| 9 | ರಂಜನಾ ಕುಲಕರ್ಣಿ | ಕನ್ನಡ - ಪ್ರಥಮ |
| 10 | ತೇಜಸ್ ಹೆಗ್ಡೆ | ಕನ್ನಡ - ಪ್ರಥಮ |
| 11 | ವೈಷ್ಣವಿ ಕೌಶಿಕ್ | ಕನ್ನಡ - ಪ್ರಥಮ |
| 12 | ವಾಸುಕಿ ಕೌಶಿಕ್ | ಕನ್ನಡ - ಪ್ರಥಮ |

ಕನ್ನಡ ಸಂಘ ಹಾಂಗ್‌ಕಾಂಗ್ ಪ್ರಥಮ ಬಾರಿಗೆ ಹಾಂಗ್‌ಕಾಗ್ಂಗ್‌ನಲ್ಲಿ ೨೦೦೭ರಲ್ಲಿ ಕನ್ನಡ ಕಲಿ ಕಾರ್ಯಕ್ರಮವನ್ನು ಪ್ರಾರಂಭಿಸಿತು. ೧೨ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕನ್ನಡ ವರ್ಣಮಾಲೆ, ಕಾಗುಣಿತ, ಒತ್ತಕ್ಷರ, ಸರಳ ಶಬ್ದಗಳನ್ನು ಓದಲು ಬರೆಯಲು ಕಲಿಸಿಕೊಡಲಾಗಿದೆ. ಎರಡುವರೆ ವರುಷಗಳ ಕಾಲ ನಿರಂತರವಾಗಿ ಸಾಗಿದ ಈ ಕಾರ್ಯಕ್ರಮದಲ್ಲಿ ೧೨ ವಿದ್ಯಾರ್ಥಿಗಳು “ಕನ್ನಡ - ಪ್ರಥಮ” ಪುರಸ್ಕಾರದಿಂದ ತೇರ್ಗಡೆಯಾಗಿದ್ದಾರೆ. ಕನ್ನಡ ಸಂಘದ ಸದಸ್ಯರಾದ ಶ್ರೀ ಸದಾಶಿವ ಹೆಗಡೆ, ಶ್ರೀ ಉದಯ್ ಕೌಶಿಕ್, ಶ್ರೀ ವೆಂಕಟ

ರಂಗನ್, ಶ್ರೀ ರಾಜೇಶ್ ಕುಲಕರ್ಣಿ, ಶ್ರೀಮತಿ ರೇಖಾ ರಂಗನ್, ಶ್ರೀಮತಿ ಅಪರ್ಣಾ ಕುಲಕರ್ಣಿ, ಶ್ರೀಮತಿ ಪೂರ್ಣಾ ಮೈಸೂರು, ಶ್ರೀಮತಿ ರಮಾ ಸದಾಶಿವ್ ಹಾಗೂ ಶ್ರೀಮತಿ ಕಾತ್ಯಯಿನಿ ಕೌಶಿಕ್ ಅವರು ವಾರಾಂತ್ಯಗಳಲ್ಲಿ ಮಕ್ಕಳಿಗೆ ಪಾಠ ಮಾಡಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ.




| | ಎರಡನೆ ಕನ್ನಡ ಕಲಿ ವರ್ಗದ ವಿದ್ಯಾರ್ಥಿಗಳು (೨೦೧೪-೨೦೧೬) | ಪ್ರಮಾಣ ಪತ್ರ |
|---|---|---|
| 1 | ಆದಿತ್ಯ ನಾಗಚಂದ್ರ | ಕನ್ನಡ - ಪ್ರಥಮ |
| 2 | ಆಶ್ರಿತಾ ಕೃಷ್ಣಸ್ವಾಮಿ | ಕನ್ನಡ - ಪ್ರಥಮ |
| 3 | ಧೃತಿ ಶ್ರೀರಾಮ್ | ಕನ್ನಡ - ಪ್ರಥಮ |
| 4 | ಮಾನಸ್ ಹಿರೇಮಠ್ | ಕನ್ನಡ - ಪ್ರಥಮ |
| 5 | ಶಾರದಾ ಮಂಜುನಾಥ ಸಾಮಗ | ಕನ್ನಡ - ಪ್ರಥಮ |
| 6 | ಶ್ರೇಯಾ ವಸಿಷ್ಠ | ಕನ್ನಡ - ಪ್ರಥಮ |
| 7 | ವಿಜಯಕುಮಾರ್ ಯಾಶಿಕಾ | ಕನ್ನಡ - ಪ್ರಥಮ |
| 8 | ಅದಿತಿ ದಿವಾಕರ್ | ಕನ್ನಡ ಕಲಿ - ಪ್ರಾರಂಭ |
| 9 | ಆದ್ವಿಕಾ ಬಲರಾಮ್ ಸುರಾ | ಕನ್ನಡ ಕಲಿ - ಪ್ರಾರಂಭ |
| 10 | ಆರ್ಯಮನ್ ಭರದ್ವಾಜ್ | ಕನ್ನಡ ಕಲಿ - ಪ್ರಾರಂಭ |
| 11 | ಬೆನಕಟ್ಟೆ ಅವನಿ | ಕನ್ನಡ ಕಲಿ - ಪ್ರಾರಂಭ |
| 12 | ಖುಶಿ ಸೋಮಶೇಖರ ಗೌಡ | ಕನ್ನಡ ಕಲಿ - ಪ್ರಾರಂಭ |
| 13 | ಮನು ಕಶ್ಯಪ್ | ಕನ್ನಡ ಕಲಿ - ಪ್ರಾರಂಭ |
| 14 | ರಿಯಾ ಅರುಣ್ | ಕನ್ನಡ ಕಲಿ - ಪ್ರಾರಂಭ |
| 15 | ಸಾನ್ವಿ ನವೀನ್ ಕಾನ | ಕನ್ನಡ ಕಲಿ - ಪ್ರಾರಂಭ |
| 16 | ಶಾಲಿಕಾ ಸ್ರೀಜಿತ್ ನಂಬಿಯಾರ್ | ಕನ್ನಡ ಕಲಿ - ಪ್ರಾರಂಭ |
| 17 | ಸುಮುಖ್ ದಿವಾಕರ್ | ಕನ್ನಡ ಕಲಿ - ಪ್ರಾರಂಭ |
| 18 | ತಾರಿಣಿ ನಾಗಚಂದ್ರ | ಕನ್ನಡ ಕಲಿ - ಪ್ರಾರಂಭ |
| 19 | ವಿಜಯಕುಮಾರ್ ತನಿಶಾ | ಕನ್ನಡ ಕಲಿ - ಪ್ರಾರಂಭ |

ಕನ್ನಡ ಸಂಘದ ಎರಡನೆಯ ಕನ್ನಡ ಕಲಿ ಕಾರ್ಯಕ್ರಮವು ಮೇ ೨೦೧೪ ರಲ್ಲಿ ಪ್ರಾರಂಭವಾಯಿತು. ಮೊದಲ ಬಾರಿಗೆ ಹಾಂಗ್‌ಕಾಂಗ್‌ನಲ್ಲಿ ಕನ್ನಡ ಕಲಿ ಕಾರ್ಯಕ್ರಮವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಯಿತು. ಹತ್ತೊಂಬತ್ತು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಕನ್ನಡ ವರ್ಣಮಾಲೆ, ಕಾಗುಣಿತ, ಒತ್ತಕ್ಷರ, ಸರಳ ಶಬ್ದಗಳನ್ನು ಓದಲು ಬರೆಯಲು ಕಲಿಸಿಕೊಡಲಾಗುತ್ತಿದೆ. ೪ ರಿಂದ ೧೫ ವರುಷಗಳವರೆಗಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಈ ಕಾರ್ಯಕ್ರಮದಲ್ಲಿ, ೭ ವಿದ್ಯಾರ್ಥಿಗಳು “ಕನ್ನಡ - ಪ್ರಥಮ” ಪುರಸ್ಕಾರದಿಂದ ತೇರ್ಗಡೆಯಾಗಿದ್ದಾರೆ. ಕಿರಿಯ ವಿದ್ಯಾರ್ಥಿಗಳು ಅಕ್ಷರಾಭ್ಯಾಸವನ್ನು ಮುಂದುವರಿಸಲಿದ್ದಾರೆ. ಕನ್ನಡ ಸಂಘದ ಸದಸ್ಯರಾದ ಶ್ರೀ ಸದಾಶಿವ ಹೆಗಡೆ, ಶ್ರೀ ಸಮೀರ್ ಪ್ರಾಣೇಶ್, ಶ್ರೀ ಗೌತಮ್ ಹೆಗಡೆ, ಶ್ರೀಮತಿ ವಾಣಿ ರಮೇಶ್ ಬಾಬು, ಶ್ರೀಮತಿ ಸುಮಿತಾ ಅರುಣ್, ಶ್ರೀಮತಿ ಸಹನಾ ಭಟ್, ಶ್ರೀಮತಿ ನಂದಾ ಶ್ರೀನಿವಾಸ್, ಶ್ರೀಮತಿ ನಿಧಿ ಪಾರ್ಶ್ವನಾಥ್, ಶ್ರೀ ಕೃಷ್ಣಸ್ವಾಮಿ ಹಾಗೂ ಶ್ರೀ ಶ್ರೀನಿವಾಸ ಮೂರ್ತಿ ಅವರು ವಾರಾಂತ್ಯಗಳಲ್ಲಿ ಮಕ್ಕಳಿಗೆ ಪಾಠ ಮಾಡಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಕಲಿ ತರಗತಿಗೆ ತಪ್ಪದೇ ಬರುತ್ತಿರುವ ಎಲ್ಲಾ ಪುಟಾಣಿಗಳು ಈ ಕಾರ್ಯಕ್ರಮದ ಸಫಲತೆಗೆ ಮುಖ್ಯವಾದ ಕಾರಣ. ಮಕ್ಕಳನ್ನು ವಾರಾಂತ್ಯದಲ್ಲಿ ಸಿದ್ದಪಡಿಸಿ ಕರೆದು ತರುವ ಪಾಲಕರು ತಮ್ಮ ಬಲವಾದ ಬೆಂಬಲ ನೀಡಿದ್ದಾರೆ. ವೇತನ ರಹಿತ ನಿಸ್ವಾರ್ಥ ಸೇವೆ ಸಲ್ಲಿಸಿದ ಶಿಕ್ಷಕ ವೃಂದದ ಸಹಾಯ ಶ್ಲಾಘನೀಯ.

ಕನ್ನಡ ಭಾಷೆಯ ಕಂಪನ್ನು ಹೊರದೇಶದಲ್ಲಿ ಪಸರಿಸಿ, ಕನ್ನಡಿಗರ ಒಕ್ಕೂಟಕ್ಕೆ ಪ್ರಯತ್ನಿಸಿ, ಕನ್ನಡ ತನದ ಉಳಿವಿಗೆ ನಿರಂತರವಾಗಿ ಪ್ರಯತ್ನಿಸುತ್ತಿರುವ ಕನ್ನಡ ಸಂಘ ಹಾಂಗ್‌ಕಾಂಗ್‌ನ ಪದಾಧಿಕಾರಿಗಳನ್ನು, ಶಿಕ್ಷಕ ವೃಂದವನ್ನು, ಪಾಲಕರನ್ನು, ಎಲ್ಲಾ ಸದಸ್ಯರನ್ನು ಈ ಕಾರ್ಯಕ್ರಮದ ಯಶಸ್ಸಿಗೆ ಸ್ಮರಿಸುತ್ತಾ, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಮಕ್ಕಳು ಕನ್ನಡಮ್ಮನ ಕೀರ್ತಿಯನ್ನು ಎಲ್ಲೆಡೆ ಬೆಳಗಲೆಂದು ಆಶಿಸುತ್ತೇವೆ.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ.
ಜೈ ಕರ್ನಾಟಕ ಮಾತೆ.